ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 08–09–2020

# ಪತ್ರಿಕಾ ಪ್ರಕಟಣೆ

## ಅಧಿವೇಶನದಲ್ಲಿ ಪಾಲ್ಗೊಳ್ಳಲು ಕೋವಿಡ್–19 ಪರೀಕ್ಷೆ ಕಡ್ಡಾಯ

ಬೆಂಗಳೂರು, ಸೆಪ್ಟಂಬರ್ 08 (ಕರ್ನಾಟಕ ವಾರ್ತೆ):

ಸೆಪ್ಟೆಂಬರ್ 21 ರಿಂದ ಆರಂಭವಾಗಲಿರುವ 15 ನೇ ವಿಧಾನ ಸಭೆಯ 7ನೇ ಅಧಿವೇಶನದಲ್ಲಿ ಪಾಲ್ಗೋಳ್ಳುವ ಪ್ರತಿಯೊಬ್ಬರೂ ಅಧಿವೇಶನದ 72 ಗಂಟೆಗಳ ಮುನ್ನ ಆರ್ ಟಿ ಪಿ ಸಿ ಆರ್ ನಾಸಿಕ ಮತ್ತು ಗಂಟಲು ದ್ರವ ಕೋವಿಡ್–19 ಪರೀಕ್ಷೆಗೆ ಕಡ್ಡಾಯವಾಗಿ ಒಳಪಡಬೇಕು. ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಕೋವಿಡ್ ಇಲ್ಲದಿರುವುದು ದೃಢಪಟ್ಟಲ್ಲಿ ಮಾತ್ರ ಸಂಬಂಧಿತ ಪ್ರಮಾಣ ಪತ್ರವನ್ನು ಆಧರಿಸಿ ಅಧಿವೇಶನದ ಕಲಾಪಗಳಲ್ಲಿ ಪಾಲ್ಗೊಳ್ಳಲು ಅಧಿವೇಶವನ್ನು ವರದಿ ಮಾಡಲು ಅವಕಾಶ ಕಲ್ಪಿಸಲಾಗುವುದು ಎಂದು ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಇಲ್ಲಿ ಇಂದು ಪ್ರಕಟಿಸಿದರು.

ಅಧಿವೇಶನದ ಸಿದ್ಧತೆ ಕುರಿತು ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಮಾತಾನಾಡಿದ ಅವರು ಕೋವಿಡ್ –19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸದಸ್ಯರೂ ಒಳಗೊಂಡಂತೆ ಎಲ್ಲರ ಆರೋಗ್ಯ ದೃಷ್ಠಿಯಿಂದ ಮುಂಜಾಗ್ರತವಾಗಿ ಅನೇಕ ಕ್ರಮ ಹಾಗೂ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಬಾರಿ ಸಾರ್ವಜನಿಕರಿಗೆ ಸದನದ ಕಲಾಪಗಳನ್ನು ವೀಕ್ಷಿಸಲು ಅವಕಾಶ ಇರುವುದಿಲ್ಲ. ಒಮ್ಮೆ ಕೋವಿಡ್–19 ಪರೀಕ್ಷೆಗೆ ಒಳಪಟ್ಟವರೂ ಹಾಗೂ ಕೋವಿಡ್–19 ಸೋಂಕು ದೃಢಪಟ್ಟು ಗೆದ್ದು ಬಂದವರೂ ಸೆಪ್ಟೆಂಬರ್ 18 ರ ನಂತರ ಮತ್ತೊಮ್ಮೆ ಪರೀಕ್ಷೆಗೆ ಒಳಪಟ್ಟು ಕೋವಿಡ್–19 ರ ಪರೀಕ್ಷೆಯಲ್ಲಿ ನೆಗೆಟೀವ್ ಎಂದು ಖಚಿತಗೊಂಡ ನಂತರವೇ ಪ್ರವೇಶ ನೀಡಲಾಗುವುದು. ಇದರಲ್ಲಿ ಯಾರಿಗೂ ರಿಯಾಯಿತಿ ಅಥವಾ ವಿನಾಯಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ವಿಧಾನ ಸಭಾ ಸಭಾಂಗಣವೂ ಸೇರಿದಂತೆ ಸದನದ ಪ್ರಾಂಗಣ ಹಾಗೂ ಸುತ್ತ–ಮುತ್ತಲ ಆವರಣವನ್ನು ಸ್ಯಾನಿಟೈಸರ್ ಮೂಲಕ ಶುಚಿಗೊಳಿಸಲಲಾಗುವುದು. ಪ್ರತಿದಿನವೂ ಅಧಿವೇಶನಕ್ಕೆ ಹಾಜಾರಾಗುವ ಎಲ್ಲರನ್ನೂ ದೇಹದ ಉಷ್ಣಾಂಶ ಪರೀಕ್ಷಿಸಿದ ನಂತರವೇ ಪ್ರವೇಶಕ್ಕೆ ಅನುವು ಮಾಡಿಕೊಡಲಾಗುವುದು. ಸದನಕ್ಕೆ ಹಾಜರಾಗಬೇಕಾದ ಸಚಿವಾಲಯದ ಅಧಿಕಾರಿ–ಸಿಬ್ಬಂದಿ ಹಾಗೂ ಮಾಧ್ಯಮ ಪ್ರತಿನಿಧಿಗಳೂ ಕೂಡಾ ಸೆಪ್ಟೆಂಬರ್ 18 ರಂದು ಕೋವಿಡ್–19 ರ ಪರೀಕ್ಷೆಗೆ ಕಡ್ಡಾಯವಾಗಿ ಒಳಪಟ್ಟು ಪ್ರಮಾಣ ಪತ್ರ ಪಡೆದು, ಅದನ್ನು ಹಾಜರುಪಡಿಸಿದಾಗಲೇ ಸದನದಲ್ಲಿ ನಿಗದಿತ ಸ್ಥಳಕ್ಕೆ ಪ್ರವೇಶ ಕಲ್ಪಿಸಲಾಗುವುದು. ಇತರರ ಹಿತಕ್ಕಾಗಿ ಮುನ್ನಚ್ಚರಿಕೆ

ಕ್ರಮಗಳನ್ನು ಪಾಲಿಸುವುದು ಎಲ್ಲರ ಕರ್ತವ್ಯ ಮತ್ತು ಜವಾಬ್ದಾರಿ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಇದರಲ್ಲಿ ಯಾರೂ ಅನಗತ್ಯ ತಪ್ಪು ಹುಡುಕುವುದಾಗಲೀ ಅಥವಾ ಅನ್ಯತಾ ಭಾವಿಸುವುದಾಗಲೀ ಬೇಡ ಎಂದು ಸಭಾಧ್ಯಕ್ಷರು ತಾಕೀತು ಮಾಡಿದರು.

ಸದನಕ್ಕೆ ಆಗಮಿಸುವ ಎಲ್ಲಾ ಸದಸ್ಯರಿಗೆ ಕೈ ಶುಚಿಗೊಳಿಸಿಕೊಳ್ಳಲು ಸ್ಯಾನಿಟೈಸರ್, ಧರಿಸಲು ಮುಖಗವಸು ( ಮಾಸ್ಕ್ ) ಹಾಗೂ ಮುಖ ಕವಚ ( ಫೇಸ್ ಶೀಲ್ಡ್ ) ಒದಗಿಸಲಾಗುವುದು. ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿದಾಗ ಮಾತ್ರವೇ ಸುಗಮ ಕಾರ್ಯಕಲಾಪ ನಡೆಸಲು ಸಾಧ್ಯ. ಅಧಿವೇಶನದ ಕಾರ್ಯಸೂಚಿಯನ್ನು ಈಗಾಗಲೇ ನಿಗದಿಪಡಿಸಲಾಗಿದೆ. ಲಭ್ಯವಿರುವ ಅವಧಿಯಲ್ಲಿಯೇ ಕಾಲ ಮಿತಿಯೊಳಗೆ ಈ ಅಧಿವೇಶನದ ಸಂದರ್ಭದಲ್ಲಿ 10 ವಿಧೇಯಕ ಮಂಡನೆ, 19 ಅಧ್ಯಾದೇಶಗಳ ಪರ್ಯಾಲೋಚನೆ ಎರಡು ವಿಧೇಯಕಗಳ ಅಂಗೀಕಾರಕ್ಕೆ ಕಾರ್ಯಸೂಚಿಯಲ್ಲಿ ನಮೂದಿಸಲಾಇದೆ. ಒಟ್ಟಾರೆ 31 ವಿಷಯಗಳ ಮೇಲೆ ಚರ್ಚೆಗೆ ಅವಕಾಶ ಇರುತ್ತದೆ ಎಂದು ವಿಶ್ವೇಶ್ವರ ಹೆಗಡಿ ಕಾಗೇರಿ ಅವರು ಹೇಳಿದರು.

ಆರಂಭದ ದಿನವಾದ ಸೆಪ್ಟೆಂಬರ್ 21 ರಂದು ಮೊದಲ ದಿನ ಶ್ರದ್ದಾಂಜಲಿಯಿಂದ ಆರಂಭವಾಗಿ ಒಟ್ಟು ಎಂಟು ದಿನಗಳಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಲಿದೆ. ಇದಕ್ಕೆ ಕಾಲಾವಕಾಶ ಅವಶ್ಯಕ. ಪತ್ರಕರ್ತರ ಗ್ಯಾಲರಿಯನ್ನು ಈ ಹಿಂದೆ ಇದ್ದ ವೀಕ್ಷಕರ ಗ್ಯಾಲರಿಗೆ ಸ್ಥಳಾಂತರಿಸಿ ಮಾಧ್ಯಮಕ್ಕೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗುವುದು, ಕೋವಿಡ್-19 ಹಿನ್ನಲೆಯಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಈ ಅಧಿವೇಶನಕ್ಕೆ ತಮ್ಮೆಲ್ಲರ ಸಹಕಾರ ಅತೀ ಮುಖ್ಯ ಎಂದು ಮಾಧ್ಯಮ ಪ್ರತಿನಿಧಿಗಳಲ್ಲಿ ಸಭಾಧ್ಯಕ್ಷರು ಮನವಿ ಮಾಡಿದರು.

ರಾಜ್ಯದಲ್ಲಿನ ಮಾದಕ ವಸ್ತುಗಳ ( ಡ್ರಗ್ಸ್ ) ವಿರುದ್ಧದ ಕಾರ್ಯಚರಣೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ ಸಭಾಧ್ಯಕ್ಷರು ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಕ್ರಮಗಳನ್ನು ಸ್ವಾಗತಿಸಿ ಯುವಶಕ್ತಿಯನ್ನು ಹಾಳುಗೆಡವುತ್ತಿರುವ ಮಾದಕ ವಸ್ತು ಜಾಲವನ್ನು ನಿರ್ಮೂಲನೆ ಮಾಡಲು ಕಠಿಣ ಕ್ರಮ ಜರುಗಿಸಬೇಕು.

ರಾಜ್ಯ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ ಎಂ. ಕೆ. ವಿಶಾಲಾಕ್ಷಿ ಮತ್ತಿತರ ಹಿರಿಯ ಅಧಿಕಾರಿಗಳೂ ಮಾಧ್ಯಮಗೋಷ್ಠಿಯಲ್ಲಿ ಹಾಜರಿದ್ದರು.

## ಎಸಿಬಿ ದಾಳಿ

**ಬೆಂಗಳೂರು, ಸೆಪ್ಟಂಬರ್ 08 (ಕರ್ನಾಟಕ ವಾರ್ತೆ):**

ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನ

ತ್ಯಾಜ್ಯದಿಂದ ಇಂಧನ ಉತ್ಪಾದಿಸುವ ಯೋಜನೆಗೆ ನೀಡಿರುವ ಅನುಮೋದನೆಗೆ ಸಂಬಂಧಿಸಿದಂತೆ ಈ ಯೋಜನೆಯ ವಿಫಲತೆ ಮತ್ತು ಅವ್ಯವಹಾರದ ಕುರಿತಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು, ಮೇ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಪ್ರೈವೇಟ್ ಲಿ. ಸಂಸ್ಥೆ ಮತ್ತು ಇತರರ ವಿರುದ್ಧ ಸರ್ಕಾರದ ಆದೇಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ.

ದಿನಾಂಕ:18/12/2002 ರಂದು ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಯೋಜನೆಗಾಗಿ ಬಿಬಿಎಂಪಿಯಿಂದ ಅಧಿಸೂಚನೆ ಹೊರಡಿಸಿದ್ದು, ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಯವರು ಸದರಿ ಸ್ಥಾವರವನ್ನು ಸ್ಥಾಪಿಸಲು ಟೆಂಡರ್‌ನಲ್ಲಿ ಆಯ್ಕೆಯಾಗಿ ದಿ.24/06/2005 ರಂದು ಬಿಬಿಎಂಪಿಯೊಂದಿಗೆ ವಿದ್ಯುತ್ ಘಟಕ ಸ್ಥಾಪಿಸಲು ಒಪ್ಪಂದು ಆಗಿದ್ದು, ಅವರಿಗೆ 35 ಎಕರೆ ಸರ್ಕಾರ ಜಮೀನನ್ನು ನೀಡಲಾಗಿದ್ದು, ಈ ಸಂಸ್ಥೆಯವರು ದಿನಾಂಕ: 05/11/2006 ರ ಒಳಗಾಗಿ ವಿದ್ಯುತ್ ಘಟಕವನ್ನು ಸ್ಥಾಪಿಸಬೇಕಾಗಿದ್ದು, ಆದರೆ ಈ ಸಂಸ್ಥೆಯವರು ನಿಗದಿತ ಅವಧಿಯೊಳಗೆ ಘಟಕವನ್ನು ಸ್ಥಾಪಿಸಲು ವಿಫಲರಾಗಿರುತ್ತಾರೆ.

ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಯವರು ಬಿಬಿಎಂಪಿಯಿಂದ ಸ್ವೀಕರಿಸುತ್ತಿದ್ದ ಘನ ತ್ಯಾಜ್ಯವನ್ನು ಯಾವುದೇ ವೈಜ್ಞಾನಿಕ ಸಂಸ್ಕರಣೆ ಮಾಡದೆಯೇ ನೇರವಾಗಿ ಲ್ಯಾಂಡ್ ಫಿಲ್‌ಗೆ ತುಂಬಿಸುತ್ತಿದ್ದು, ಅಸಮರ್ಪಕ ನಿರ್ವಹಣೆಯಿಂದಾಗಿ ಮಂಡೂರು ಮತ್ತು ಸುತ್ತುಮುತ್ತಲಿನ ಗ್ರಾಮದಲ್ಲಿ ಪರಿಸರ ಮಾಲಿನ್ಯ ಉಂಟಾಗಿರುತ್ತದೆ. ಲ್ಯಾಂಡ್ ಫಿಲ್‌ಗಳಲ್ಲಿ ಸಂಗ್ರಹವಾಗುವ ಲಿಚೇಟ್( ತ್ಯಾಜ್ಯ) ನೀರನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೇ ಅದು ಅಲ್ಲಲ್ಲಿ ಸಂಗ್ರಹವಾಗಿ ಭೂಮಿಯೊಳಗೆ ಇಂಗಿ ಮಂಡೂರು ಮತ್ತು ಸುತ್ತಮುತ್ತಲಿನ ಗ್ರಾಮಗಳ ಅಂತರ್ಜಲ ಸಂಪೂರ್ಣ ಹದಗೆಟ್ಟು, ಅಂತರ್ಜಲವನ್ನು ಉಪಯೋಗಿಸಲಾರದ ಪರಿಸ್ಥಿತಿ ಉಂಟಾಗಿರುತ್ತದೆ.

ಹಾಗೂ ಕಸಾಯಿಖಾನೆಯಿಂದ ಹೊರಹೊಮ್ಮುವ ತ್ಯಾಜ್ಯವನ್ನು ಬಿಬಿಎಂಪಿಯವರು ಮಂಡೂರು ಘಟಕದಲ್ಲಿ ತಂದು ಸುರಿಯುತ್ತಿದ್ದು, ಆ ಕಾರಣದಿಂದ ಸದರಿ ಘಟಕದಲ್ಲಿ ನಾಯಿ, ಹದ್ದು, ನೊಣ, ಸೊಳ್ಳೆಗಳು ಹೆಚ್ಚಾಗಿ ಸುತ್ತಮುತ್ತಲಿನ ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ ಪರಿಸ್ಥಿತಿಯು ವಿಕೋಪಕ್ಕೆ ತಿರುಗಿರುತ್ತದೆ.

ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಗೆ ಘನ ತ್ಯಾಜ್ಯದಿಂದ ವಿದ್ಯುತ್ ಘಟಕ ಸ್ಥಾಪಿಸಲು ಬಿಬಿಎಂಪಿಯಿಂದ ಮಂಜೂರಾಗಿದ್ದ ಜಮೀನನ್ನು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೆ ಅಡಮಾನ ಇಟ್ಟು ರೂ.52.75 ಕೋಟಿಗಳ ಸಾಲವನ್ನು ಪಡೆದಿರುವುದು ಕಂಡುಬಂದಿರುತ್ತದೆ.

ಬಿಬಿಎಂಪಿಯವರು ಸರಬರಾಜು ಮಾಡಿರುವ ಘನ ತ್ಯಾಜ್ಯಕ್ಕೆ ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಗೆ ರೂ.4.61 ಕೋಟಿ ಟಿಪ್ಪಿಂಗ್ ಶುಲ್ಕವನ್ನು ಪಾವತಿಸಿದ್ದು, ಸಂಸ್ಕರಣೆ ಮಾಡದ ಘನ ತ್ಯಾಜ್ಯಕ್ಕೂ ಸಹ ಹಣ ಬಿಡುಗಡೆ ಮಾಡಿರುವುದು ಕಂಡುಬಂದಿರುತ್ತದೆ.

ಈ ಮೇಲಿನ ಎಲ್ಲಾ ಸಮಸ್ಯೆಗಳಿಗೆ ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಯ ಆಡಳಿತ ಮಂಡಳಿ ಮತ್ತು ಸಂಬಂಧಪಟ್ಟ ಬಿಬಿಎಂಪಿ ಅಧಿಕಾರಿಗಳು ಕಾರಣರಾಗಿದ್ದು, ಈ ಹಿನ್ನೆಲೆಯಲ್ಲಿ ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಯೊಂದಿಗೆ ಬಿಬಿಎಂಪಿಯು ಮಾಡಿಕೊಂಡ ಕರಾರನ್ನು ದಿ.23/09/2014 ರಂದು ರದ್ದುಗೊಳಿಸಿದ್ದು, ಬೆಂಗಳೂರು ನಗರದ ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಘನ ಸರ್ಕಾರದ ಪ್ರಮುಖ ಯೋಜನೆಯು ವಿಫಲವಾಗಿರುತ್ತದೆ.

ಈ ದಿನ ದಿನಾಂಕ: 08/09/2020 ರಂದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ಠಾಣೆಯ ವಿವಿಧ ತಂಡಗಳಿಂದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಪಾದಿತರ ಮನೆ ಮತ್ತು ಕಛೇರಿಗಳ ಮೇಲೆ ದಾಳಿ ನಡೆಸಲಾಗಿರುತ್ತದೆ. ಈವರೆಗೆ ಶೋಧನೆ ನಡೆಸಲಾದ ಸ್ಥಳಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

1. ರಮೇಶ್ ಬಿಂಗಿ ಬಿನ್ ಬಿ.ಎಲ್ ಸುಬ್ಬರಾಮಯ್ಯ, ವ್ಯವಸ್ಥಾಪಕ ನಿರ್ದೇಶಕರು, ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಪ್ರೈ.ಲಿ ರವರ ಎಸ್.ಬಿ.ಎಂ. ಕಾಲೋನಿ ಬನಶಂಕರಿಯಲ್ಲಿನ ವಾಸದ ಮನೆ.
2. ಮೆ.ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಸಂಸ್ಥೆಯ ಬನಶಂಕರಿ 3ನೇ ಹಂತದಲ್ಲಿನ ಕಛೇರಿ.
3. ಶಿವಲಿಂಗೇಗೌಡ, ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) ಇವರ ಮಂಡ್ಯ ಜಿಲ್ಲೆಯ ಚಾಮುಂಡೇಶ್ವರಿ ನಗರದಲ್ಲಿನ ನಿವಾಸ.
4. ಚೆನ್ನಕೇಶವ ಹೆಚ್.ಆರ್, ನಿವೃತ್ತ ಸಹಾಯಕ ಅಭಿಯಂತರರು, ಬಿಬಿಎಂಪಿ ಇವರ ಮೈಸೂರು ನಗರದ ವಿಜಯನಗರದಲ್ಲಿನ ನಿವಾಸ.

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಸ್ಥಳಗಳಲ್ಲಿ ಶೋಧನೆ ಕಾರ್ಯ ಕೈಗೊಂಡಿದ್ದು ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಿಇಟಿ/ನೀಟ್ ನಲ್ಲಿ ಆಯ್ಕೆಯಾಗುವ
## ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಸಾಲ

**ಬೆಂಗಳೂರು, ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ)**

2020–21ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ/ನೀಟ್ ನಲ್ಲಿಆಯ್ಕೆಯಾಗುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅಪೇಕ್ಷಿಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ನಿಗಮದ ವೆಬ್ ಸೈಟ್**kmdc.kar.nic.in/Arivu2**"***ಆನ್ ಲೈನ್***" ಮುಖಾಂತರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

(1) ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ 02.09.2020

(2) ಕೊನೆಯ ದಿನಾಂಕ 18.09.2020

(3) ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಕ್ರೋಢೀಕೃತ ಮಾಹಿತಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:20.09.2020

ಅರಿವು ವೆಬ್ ಸೈಟ್**kmdc.kar.nic.in/Arivu2**ನಲ್ಲಿ ವಿದ್ಯಾರ್ಥಿಗಳು "***ಆನ್ ಲೈನ್***"ಮುಖಾಂತರ ಅರ್ಜಿ ಸಲ್ಲಿಸಿ ಅದರ ಹಾರ್ಡ್ ಕಾಪಿಗಳನ್ನು ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ಸಲ್ಲಿಸುವ ಕೊನೆಯ ದಿನಾಂಕ: 18.9.2020. ಸಿಇಟಿ/ನೀಟ್ ಪರೀಕ್ಷಾ ಪ್ರವೇಶ ಪ್ರತಿ/ ಸಿಇಟಿ ಆರ್ಡರ್ ಪ್ರತಿಗಳನ್ನು ಪಡೆಯಬೇಕು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Devitrification Demystified

**Bengaluru, September 8 (Karnataka Information)**

Glass is amorphous in nature – its atomic structure does not involve the repetitive arrangement seen in crystalline materials. But occasionally, it undergoes a process called devitrification, which is the transformation of a glass into a crystal – often an unwanted process in industries. The dynamics of devitrification remain poorly understood because the process can be extremely slow, spanning decades or more.

Now, a team of researchers led by Rajesh Ganapathy, Associate Professor at the Jawaharlal Nehru Centre for Advanced Scientific Research (JNCASR), in collaboration with Ajay Sood, DST Year of Science Chair and Professor at the Indian Institute of Science (IISc), and their PhD student Divya Ganapathi (IISc) has visualised devitrification for the first time in experiments. The results of this study have been published in *Nature Physics*.

"The trick was to work with a glass made of colloidal particles. Since each colloidal particle can be thought of as a substitute for a single atom, but being ten thousand times bigger than the atom, its dynamics can be watched in real-time with an optical microscope. Also, to hasten the

process we tweaked the interaction between particles so that it is soft and rearrangements in the glass occurred frequently," says Divya Ganapathi.

In order to make a glass, Divya Ganapathi and the team jammed the colloids together to reach high densities. The researchers observed different regions of the glass following two routes to crystallisation: an avalanche-mediated route involving rapid rearrangements in the structure, and a smooth growth route with rearrangements happening gradually over time.

To gain insights into these findings, the researchers then used machine learning methods to determine if there was some subtle structural feature hidden in the glass that *apriori* decides which regions would later crystallise and through what route. Despite the glass being disordered, the machine learning model was able to identify a structural feature called "softness" that had earlier been found to decide which particles in the glass rearrange and which do not.

The researchers then found that regions in the glass which had particle clusters with large "softness" values were the ones that crystallised and that "softness" was also sensitive to the crystallisation route. Perhaps the most striking finding emerging from the study was that the authors fed their machine learning model pictures of a colloidal glass and the model accurately predicted the regions that crystallised days in advance. "This paves the way for a powerful technique to identify and tune 'softness' well in advance and avoid devitrification," says Ajay Sood.

Understanding devitrification is crucial in areas like the pharmaceutical industry, which strives to produce stable amorphous drugs as they dissolve faster in the body than their crystalline counterparts. Even liquid nuclear waste is vitrified as a solid in a glass matrix to safely dispose it of deep underground and prevent hazardous materials from leaking into the environment.

The authors believe that this study is a significant step forward in understanding the connection between the underlying structure and stability of glass. "It is really cool that a machine learning algorithm can predict where the glass is going to crystallise and where it is going to stay glassy. This could be the initial step for designing more stable glasses like the gorilla glass on mobile phones, which is ubiquitous in modern technology," says Rajesh Ganapathy. The ability to manipulate structural parameters could usher in new ways to realise technologically significant long-lived glassy states.

**REFERENCE:**

Ganapathi, D., Chakrabarti, D., Sood, A.K. et al. Structure determines where crystallization occurs in a soft colloidal glass. *Nat. Phys.* (2020).

https://doi.org/10.1038/s41567-020-1016-4

**IMAGE CREDIT:** Rajesh Ganapathy

**CONTACT:**

Rajesh Ganapathy
Associate Professor
International Centre for Materials Science & School of Advanced Materials
Jawaharlal Nehru Centre for Advanced Scientific Research (JNCASR)
rajeshg@jncasr.in, rajesh.ganapathy@gmail.com
080-22082752

Ajay Sood
DST Year of Science Chair and Professor
Department of Physics
Indian Institute of Science (IISc)
asood@iisc.ac.in, asood1951@gmail.com
080-22932964

**NOTE TO JOURNALISTS:**
a) If any of the text in this release is reproduced verbatim, please credit the IISc press release.
b) For any queries about IISc press releases, please write to news@iisc.ac.in or pro@iisc.ac.in.

# ದತ್ತು ಸ್ವೀಕಾರ

**ಬೆಂಗಳೂರು, ಸೆಪ್ಟಂಬರ್ 08, (ಕರ್ನಾಟಕ ಸರ್ಕಾರ):**

**ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಹಿರಿಯ ನಟ ಡಾ. ಶಿವರಾಜ್ ಕುಮಾರ್ ಇವರ ಅಭಿಮಾನಿಗಳ ಸಂಘ ನವಿಲು, ರೀಸಸ್ ಮೆಕಾಕ್, ಮ್ಯಾಂಡರಿನ್ ಡಕ್, ನಾಲ್ಕು ಕೊಂಬಿನ ಜಿಂಕೆ ಮತ್ತು ಇತರೆ ಪ್ರಾಣಿಗಳನ್ನು ರೂ. 89,000/– ಪಾವತಿಸಿ ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟಂಬರ್ 08(ಕರ್ನಾಟಕ ವಾರ್ತೆ):**

**ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ಸೆಪ್ಟಂಬರ್ 10 ರಿಂದ 12 ರ ವರೆಗೆ ಒಟ್ಟು ಮೂರು ದಿನಗಳ ಕಾಲ ರಾಯಚೂರು ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## "ಕೋವಿಡ್ 19 ರ ಸಂದರ್ಭದಲ್ಲಿ ಒತ್ತಡದ ನಿರ್ವಹಣೆ

**ಬೆಂಗಳೂರು, ಸೆಪ್ಟಂಬರ್ 08(ಕರ್ನಾಟಕ ವಾರ್ತೆ):**

ಮಾತನಾಡುತ್ತಾ, ಮನುಷ್ಯನ ಒತ್ತಡವನ್ನು ಹೋಗಲಾಡಿಸಲು ಕೆಲವು ಕೌಶಲ್ಯಗಳನ್ನು ಹಾಗೂ ಉತ್ತಮ ಅಭ್ಯಾಸಗಳನ್ನು ರೂಢಿ ಮಾಡಿಕೊಳ್ಳಬೇಕು. ತ್ರೀಮೂರ್ತಿಗಳಾದ ಯೋಗ, ವ್ಯಾಯಾಮ ಹಾಗೂ ಪ್ರಾಣಾಯಾಮ, ಒತ್ತಡ ವಿರುದ್ಧ ಕೆಲಸ ಮಾಡುವ ಔಷಧಿ ಎಂದರೆ ತಪ್ಪಾಗಲಾರದು ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ ಆರ್ ವೇಣುಗೋಪಾಲ್ ರವರು ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಯೋಜನೆ ಕೋಶ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಎನ್.ಎಸ್.ಎಸ್. ಕೋಶದ ವತಿಯಿಂದ ಜಂಟಿಯಾಗಿ ನಡೆಸಿದ ರಾಜ್ಯಮಟ್ಟದ ಕಾರ್ಯಗಾರದ ವಸ್ತು ವಿಚಾರವಾದ, "ಕೋವಿಡ್ 19 ರ ಸಂದರ್ಭದಲ್ಲಿ ಒತ್ತಡದ ನಿರ್ವಹಣೆ" ಎಂಬ ಕಾರ್ಯಕ್ರಮದ ಉದ್ಘಾಟಿಸಿದ ಅವರು ನಂತರ ಮಾತನಾಡಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಅಧಿಕಾರಿಗಳು ಹಾಗೂ ಸ್ವಯಂ ಸೇವಕರು ಕಾರ್ಯಗಾರದಲ್ಲಿ ತಿಳಿಸುವ ಉಪನ್ಯಾಸವನ್ನು ತಿಳಿದುಕೊಂಡು ನೆರೆಹೊರೆಯವರಿಗೆ ಈ ವಿಚಾರಗಳನ್ನು ತಿಳಿಸಿ ಅವರ ಜೀವನದಲ್ಲಿ ಎದುರಿಸುವ ಒತ್ತಡವನ್ನು ಕಡಿಮೆ ಮಾಡಿದರೆ ಇಂತಹ ಕಾರ್ಯಕ್ರಮಗಳು ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ ಎಂದು ತಿಳಿಸಿದರು.

ಆದ್ದರಿಂದ ಡಾ.ಗಣನಾಥ ಶೆಟ್ಟಿಯವರು ಮಾತನಾಡುತ್ತಾ, ಮನುಷ್ಯನ ಒತ್ತಡವನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಅರಿವನ್ನು ಮೂಡಿಸುವ ಕೆಲಸವನ್ನು ನಾವೆಲ್ಲರೂ ಸಾಮೂಹಿಕವಾಗಿ ಮಾಡಬೇಕಾಗುತ್ತದೆ. ಈ ಕರೋನಾ ಸಂದರ್ಭದಲ್ಲಿ, ಹಲವಾರು ಕ್ಷೇತ್ರದಲ್ಲಿ ಕೆಲಸ ಮಾಡುವವರ ಅಂದರೆ ಶಿಕ್ಷಕರ, ವ್ಯವಹಾರಸ್ಥರ ,ವಿದ್ಯಾರ್ಥಿಗಳ ಹಾಗೂ ಅಧಿಕಾರಿಗಳ ಇತ್ಯಾದಿ ಎಲ್ಲಾ ವರ್ಗದವರು ಬಹಳ ಒತ್ತಡದಿಂದ ಬದುಕುತ್ತಿದ್ದು, ಇದರಿಂದ ಹೊರಬರುವ ಅನಿವಾರ್ಯತೆ ಇದೆ ಎಂದು ತಿಳಿಸಿದರು. ಈ ಸಂಬಂಧ ಒತ್ತಡ ಬರಲು ಕಾರಣಗಳು ಹಾಗೂ ಅದನ್ನು ಹೇಗೆ ನಿಭಾಯಿಸಬೇಕು ಎಂಬ ವಿಚಾರದ ಬಗ್ಗೆ ಈ ಕಾರ್ಯಗಾರವು ಅರ್ಥ ಪೂರ್ಣ ಮಾಹಿತಿ ನೀಡುವ ಪ್ರಯತ್ನ ಆಗಿದೆ ಎಂದು ತಿಳಿಸಿದರು.

ಡಾ. ಎನ್. ಸತೀಶ್ ಗೌಡ ರವರು ಮಾತನಾಡುತ್ತಾ ಈ "ಒತ್ತಡ" ಎಂಬ ಕಾಯಿಲೆ, ಹೃದಯ, ಕ್ಯಾನ್ಸರ್ ಹಾಗೂ ಕರೋನ ರೋಗದ ಕಾಯಿಲೆಗಳಿಗಿಂತ ದೊಡ್ಡದು. ಈ ಒತ್ತಡ ಕಾಯಿಲೆಯು ಎಲ್ಲಾ ರೋಗಗಳ ತಾಯಿ ಇದ್ದಂತೆ. ಇಂದಿನ ಯುವಜನತೆ ಹಾಗೂ ಸಾರ್ವಜನಿಕರು ಕಾರಣಗಳಿಲ್ಲದೆ ಒತ್ತಡಗಳನ್ನು ತಮ್ಮ ಜೀವನದಲ್ಲಿ ತಂದುಕೊಂಡು ಹಲವಾರು ರೋಗಗಳಿಗೆ ಬಲಿಯಾಗಿ ಆಸ್ಪತ್ರೆಗಳತ್ತ ಮುಖ ಮಾಡುತ್ತಿರುವುದು ನಿಜಕ್ಕೂ ನೋವಿನ ಸಂಗತಿ. ದೈಹಿಕ ಅನಾರೋಗ್ಯಕ್ಕಿಂತ, ಮಾನಸಿಕ ಅನಾರೋಗ್ಯಗಳು ಹೆಚ್ಚಾಗಿದ್ದು, ಜನರು ಇದರ ಬಗ್ಗೆ ಜಾಗೃತಿ ವಹಿಸಬೇಕಾಗಿದೆ ಎಂದು ತಿಳಿಸಿದರು. ಈ ಸಂಬಂಧ ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಕೋಶ ಈ ರೀತಿಯ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ.

ಡಾ.ಪೂರ್ಣಿಮಾ ಜೋಗಿ ರವರು ಮಾತನಾಡುತ್ತಾ,ಒತ್ತಡರಹಿತ ಜೀವನ,ಉತ್ತಮ ಜೀವನಕ್ಕೆ ನಾಂದಿ. ಈ ದಿನ ನಮ್ಮ ಯುವಜನತೆ ಎಲ್ಲಾ ಒತ್ತಡಗಳಿಂದ ಹೊರಬಂದು ಮುಂದಿನ ಭವಿಷ್ಯವನ್ನು ಕಾಪಾಡಬೇಕು ಎಂದು ತಿಳಿಸಿದರು.
ನಿಮಾನ್ಸ್ನ ತರಬೇತಿ ಸಂಯೋಜಕರಾದ ರಚನ ಡಿ'ಸೋಜಾ
ಎಂಬವರು ಒತ್ತಡ ತಡೆಗಟ್ಟಲು ಅಳವಡಿಸಿಕೊಳ್ಳಬೇಕಾದ ಜೀವನ ಕೌಶಲ್ಯತೆ ಗಳ ಬಗ್ಗೆ ಉಪನ್ಯಾಸವನ್ನು ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಎಸ್ ಎಸ .ಎಸ್ ಯೋಜನಾಧಿಕಾರಿಗಳು, ಬೆಂಗಳೂರು ವಿದ್ಯಾಲಯದ ಸಂಯೋಜಿತ ಕಾಲೇಜಿನ ಎನ್ಎಸ್ಎಸ.ಕಾರ್ಯಕ್ರಮ ಅಧಿಕಾರಿಗಳು ಹಾಗೂ ಸ್ವಯಂ ಸೇವಕರು ಭಾಗವಹಿಸಿದ್ದರು.

## ಇಗ್ನೋ (IGNOU) ಕೋರ್ಸುಪ್ರವೇಶಾತಿ

**ಬೆಂಗಳೂರು, ಸೆಪ್ಟಂಬರ್ 08(ಕರ್ನಾಟಕ ವಾರ್ತೆ):** ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (IGNOU)ವು 2020-21ನೇ ಶೈಕ್ಷಣಿಕ ಸಾಲಿಗಾಗಿ ವಿವಿಧ ಕೋರ್ಸುಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಜ್ಞಾನಗಂಗಾ ಆವರಣದಲ್ಲಿ **ಇಗ್ನೋ** ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವಿದ್ದು, ಸದರಿ ಕೇಂದ್ರದಡಿಯಲ್ಲಿ 18 ಸ್ನಾತಕೋತ್ತರ (Master's Degree Programmes), 10 ಸ್ನಾತಕೋತ್ತರ ಮತ್ತು ಉನ್ನತ ಡಿಪ್ಲೋಮಾ (PG & Advanced Diploma Programmes), 11 ಸ್ನಾತಕ (Bachelor's Degree Programmes), 05 ಡಿಪ್ಲೋಮಾ (Diploma Programmes) ಮತ್ತು 10 ಸರ್ಟಿಫಿಕೇಟ್ (Certificate Programmes) ಕೋರ್ಸುಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಗಣಕಾನ್ವಯ (Computer Applications), ಗ್ರಾಮೀಣಾಭಿವೃದ್ಧಿ, ವಾಣಿಜ್ಯಶಾಸ್ತ್ರ, ಸಮಾಜ ಕಾರ್ಯ, ಅರ್ಥಶಾಸ್ತ್ರ, ಇತಿಹಾಸಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ಪ್ರವಾಸಿ ಮತ್ತು ಯಾತ್ರಿಕ ವ್ಯವಸ್ಥಾಪನೆ (Tourism and Travel Management), ಇಂಗ್ಲೀಷ್ ಹಾಗೂ ಹಿಂದಿ ಮುಂತಾದ ಸ್ನಾತಕೋತ್ತರ ಕೋರ್ಸುಗಳಿಗೆ; ಬಿಸಿಎ, ಬಿಎ, ಬಿಕಾಂ, ಬಿಪಿಪಿ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಮುಂತಾದ ಸ್ನಾತಕ ಕೋರ್ಸುಗಳಿಗೆ ಹಾಗೂ ವಿವಿಧ ಡಿಪ್ಲೋಮಾ (Diploma) ಮತ್ತು ಸರ್ಟಿಫಿಕೇಟ್ (Certificate) ಕೋರ್ಸುಗಳಿಗೆ ಪ್ರವೇಶ ಪಡೆಯಬಹುದಾಗಿದೆ.

**ಇಗ್ನೋ** ವಿಶ್ವವಿದ್ಯಾಲಯವು ತನ್ನದೇ ಉತ್ಕೃಷ್ಠವಾದ ಅಧ್ಯಯನ ಸಾಮಗ್ರಿ (Study Material) ತಯಾರಿಸಿದ್ದು, ಸಮಯಕ್ಕೆ ಸರಿಯಾಗಿ ತನ್ನ ಎಲ್ಲ ವಿದ್ಯಾರ್ಥಿಗಳ ಮನೆ ಬಾಗಿಲಿಗೆ ತಲುಪಿಸುತ್ತದೆ.

ಕೆಲವೊಂದು ಷರತ್ತಿಗೊಳಪಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆಯ್ದ ಸುಮಾರು 100ಕ್ಕೂ ಹೆಚ್ಚು ಕೋರ್ಸುಗಳಿಗೆ ಪ್ರವೇಶ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

**ಇಗ್ನೋ** ವಿಶ್ವವಿದ್ಯಾಲಯದ ಇನ್ನೊಂದು ವಿಶೇಷತೆಯೇನೆಂದರೆ, ಏಕಕಾಲಕ್ಕೆ ಎರಡು

ಕೋರ್ಸುಗಳನ್ನು ಅಧ್ಯಯನ ಮಾಡಬಹುದು.

ಕೋವಿಡ್–19 ಸೋಂಕಿನ ಮಹಾಮಾರಿಗೆ ಇಡೀ ವಿಶ್ವ ಹಾಗೂ ಭಾರತ ದೇಶ ನಲುಗಿ ಹೋಗಿದೆ, ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರದ ಚಟುವಟಿಕೆಗಳು ಭಾರಿ ಹೊಡತ್ತಕ್ಕೆ ಗುರಿಯಾಗಿದೆ. ಆದರೆ, **ಇಗ್ನೋ** ವಿಶ್ವವಿದ್ಯಾಲಯವು ವಿವಿಧ ಆಧುನಿಕ ತಂತ್ರಜ್ಞಾನದ ಮೂಲಕ ತನ್ನ ವಿದ್ಯಾರ್ಥಿಗಳಿಗೆ ನಿರಂತರ ಪಾಠ–ಪ್ರವಚನ ಮಾಡುತ್ತಲ್ಲಿದೆ.

ಕೋವಿಡ್–19 ಸೋಂಕಿನ ಮಹಾಮಾರಿಯ ಸಂದರ್ಭದಲ್ಲಿ **ಇಗ್ನೋ** ವಿಶ್ವವಿದ್ಯಾಲಯದ ಕೋರ್ಸುಗಳು ಅಧ್ಯಯನವು ಬಹಳ ಸಂದರ್ಭಯೋಗ್ಯ–ಸಂದರ್ಭಯೋಚಿತವಾಗಿವೆ, ಕಾರಣ ವಿದ್ಯಾರ್ಥಿಗಳು ಮನೆಯಲ್ಲಿಯೇ ಕುಳಿತು ಹೆಚ್ಚಿನ ವಿದ್ಯೆ, ಜ್ಞಾನ ಮತ್ತು ವಿಭಿನ್ನ–ವಿಶೇಷ ಪದವಿಗಳನ್ನು ಸಂಪಾದನೆ ಮಾಡಬಹುದಾಗಿದೆ.

ಮರುನೋಂದಣಿ ಹಾಗೂ ಹೊಸದಾಗಿ ನೋಂದಣಿಗೆ ದಿನಾಂಕ 15.09.2020 ರವರೆಗೆ ವಿಸ್ತರಿಸಲಾಗಿದೆ, ಪ್ರವೇಶ ಪಡೆಯಲು ಬಯಸುವ ಹೊಸ ವಿದ್ಯಾರ್ಥಿಗಳು **ಇಗ್ನೋ** ವಿಶ್ವವಿದ್ಯಾಲಯದ ಸಮರ್ಥ ಪೋರ್ಟಲ್ ಲಿಂಕ್ (https://ignouadmission.samarth.edu.in./) ನಲ್ಲಿ ನೋಂದಾಯಸಿಕೊಳ್ಳಬಹುದು. ಹೆಚ್ಚಿನ ಮಾಗಿತಿ ಹಾಗೂ ವಿವರಕ್ಕಾಗಿ ಅಧಿಕಾರಿಗಳಿಗೆ ಸಂಪರ್ಕಿಸಬಹುದು. **ಡಾ. ದೇವಿದಾಸ ಮಾಲೆ** ,ಸಹಾಯಕ ಸಂಯೋಜಕರು, ಇಗ್ನೋ ಅಧ್ಯಯನ ಕೇಂದ್ರ, ಮೊಬೈಲ್: 9845737713. **ಡಾ. ಎ. ವೆಂಕಟರಮಣ,** ಸಂಯೋಜಕರುಇಗ್ನೋ ಅಧ್ಯಯನ ಕೇಂದ್ರ, ಮೊಬೈಲ್: 9880801017 ಸಂಪರ್ಕಿಸಬಹುದಾಗಿದೆ.